ನಮ್ಮ ಐತಿಹಾಸಿಕ ಕೋಟೆಗಳು, ಅರಮನೆಗಳಲ್ಲಿ ರಾಜರಾಣಿಯರ ಸ್ನಾನಕ್ಕೆಂದು ವಿಶೇಷ ಸ್ನಾನಗೃಹಗಳು, ಈಜುಗೊಳಗಳನ್ನು ನಿರ್ಮಿಸಿರುವುದನ್ನು ಎಲ್ಲೆಡೆ ನೋಡುತ್ತೇವೆ. ಅವುಗಳಿಗೆ ನೀರು ಸರಬರಾಜು, ನೀರು ಹೊರ ಹೋಗಲು ಮಾಡಲಾದ ವ್ಯವಸ್ಥೆ, ಪಕ್ಕದಲ್ಲಿ ಅಂದದ ಜಾಲೆಂದರಗಳನ್ನು ನೋಡಬಹುದು. ಸ್ನಾನ, ಈಜು ಒಂದು ಮನೋಲ್ಲಾಸದ ಜಲಕೇಳಿಯಾಗಿ ಮೊದಲಿನಿಂದಲೂ ಪ್ರಸಿದ್ಧ. ಹಂಪಿಯಲ್ಲಿ ರಾಜರಾಣಿಯರ ಸ್ನಾನದ ಅಂದದ ಸ್ಮಾರಕ ಬೆರಗಿನ ವಿನ್ಯಾಸದಿಂದ ಕೂಡಿದೆ. ಈಗ ಮನೆ ಮನೆಗಳಲ್ಲಿ ಆಧುನಿಕ ಸ್ನಾನದ ಕೊಠಡಿಗಳು ಮನೆಯ ಮಹತ್ವದ ಭಾಗವಾಗಿ ರೂಪಗೊಳ್ಳುತ್ತಿವೆ.

ಸ್ನಾನಕ್ಕೆ 'ಮಡಿ ಆಗುವದು' ಎಂದು ಇನ್ನೊಂದು ಹೆಸರು. ಸ್ನಾನ ಮಾಡಿ ಯಾರನ್ನೂ, ಏನೊಂದನ್ನೂ ಮುಟ್ಟದೇ, ನೇಮ ನಿಷ್ಠೆಗಳನ್ನು ಅನುಸರಿಸುತ್ತಾ, ಗುನಗುತ್ತ ದೇವರ ಪೂಜೆ ಮಾಡುವ, ಅಡುಗೆ ಮಾಡುವ ಮಡಿವಂತರನ್ನು ನೋಡುತ್ತೇವೆ. ಅಂಥವರಿಗೆ ಎಲ್ಲರೂ ಅಸ್ಪೃಶ್ಯರೇ. ಪುರಂದರದಾಸರು ತಮ್ಮ ಒಂದು ಪದದಲ್ಲಿ:

'ಮಡಿ ಮಡಿ ಎಂದು ಅಡಿಗಡಿಗೆ ಹಾರುವೆ ಮಡಿ
ಮಾಡುವ ಬಗೆ ಬೇರುಂಟು
ಬಟ್ಟೆಯ ನೀರೊಳಗದ್ದಿ , ಒಣಗಿಸಿ
ಉಟ್ಟುಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮ ಕ್ರೋಧ ಮದಮತ್ಸರ
ಬಿಟ್ಟು ನಡೆದರೆ ಅದು ಮಡಿಯು
ಪುರಂದರ ವಿಠಲನ ಇರುಳು ಹಗಲು
ಸ್ಮರಿಸುವುದು ಮಡಿಯು'

ಎಂದು ಮಡಿ ಮಾಡುವವರನ್ನು ಛೇಡಿಸಿದ್ದಾರೆ.

ಇತ್ತೀಚೆಗೆ ಜಾರ್ಖಂಡ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ 133ರ ದುಸ್ಥಿತಿ ಕುರಿತು ಪ್ರತಿಭಟಿಸಲು ಅಲ್ಲಿನ ಶಾಸಕಿ ಒಬ್ಬರು ನೀರು ನಿಂತಿರುವ ಹೆದ್ದಾರಿ ಮಧ್ಯ ಕುಳಿತು ಸ್ನಾನ ಮಾಡುತ್ತಿದ್ದ ದೃಶ್ಯ ಪ್ರಸಾರವಾಗಿ ಸ್ನಾನಕ್ಕೆ ಹೊಸ ಆಯಾಮ ಮತ್ತು ಹೊಸ ಸ್ಥಳ ಪ್ರಾಪ್ತವಾದಂತೆ ಆಯಿತು. ಅಲ್ಲಿಯೇ ಮತ್ತೊಬ್ಬ ಹದಗೆಟ್ಟ ರಸ್ತೆ ಮಧ್ಯೆ ಕೆಸರಿನಲ್ಲಿ ಕುಳಿತು ಕ್ಷೌರ ಮಾಡಿಸಿಕೊಳ್ಳುತ್ತಿದ್ದ ದೃಶ್ಯ ಪ್ರಸಾರವಾಯಿತು. ಅಷ್ಟಾದ ಮೇಲೆಯೂ ಆ ಹೆದ್ದಾರಿ ದುರಸ್ತಿಗೊಂಡಿತೋ, ಇಲ್ಲವೋ ಎಂಬುದು ತಿಳಿದು ಬಂದಿಲ್ಲ. ಅಥವಾ ರಸ್ತೆ ಮೇಲೆ ಜನ ದೂಳು, ಕೆಸರು, ಕೊಳಚೆಯ ಸ್ನಾನ ಮಾಡುತ್ತಿರಲಿ ಎಂದು ದುರಸ್ತಿ ಮಾಡದೆ ಹಾಗೆ ಬಿಟ್ಟಿರಲೂಬಹುದು. ಈ ವರ್ಷ ಕರ್ನಾಟಕದಾದ್ಯಂತ ಸುರಿದ ವಿಪರೀತ ಮಳೆಗೆ ರಾಜ್ಯದ ರಾಜ್ಯಧಾನಿ ಬೆಂಗಳೂರು ಸಹಿತ, ರಾಜ್ಯದ ಮೂಲೆ ಮೂಲೆಗಳಿಗೆ ಜಲಾಭಿಷೇಕವಾಗಿ ಗುಡಿಸಲುಗಳಲ್ಲಿ ವಾಸಿಸುವವರಿಂದ ಹಿಡಿದು ಮಹಲು, ವಿಲ್ಲಾಗಳಲ್ಲಿ ವಾಸಿಸುವವರಿಗೆ ಕೂಡ ಮಳೆಯ, ಪ್ರವಾಹದ ನೀರಿನ, ಮೋರಿಗಳ ನೀರಿನ ಸ್ನಾನವಾಗಿದೆ.

ಮಾನವ ತನ್ನ ದೇಹ ಶುದ್ಧಿಗಾಗಿ ಏನೆಲ್ಲ ಸೌಕರ್ಯಗಳನ್ನು ಮಾಡಿಕೊಂಡಿದ್ದಾನೆ. ದೇಹವನ್ನು ಸ್ನಾನದ ವೇಳೆ ನಾನಾ ತರದ ಸೋಪು, ಶಾಂಪುಗಳಿಂದ ದಿನಾಲು ಸ್ವಚ್ಛಗೊಳಿಸಿಕೊಳ್ಳುತ್ತಾನೆ. ನಂತರ ಅನೇಕ ಪ್ರಸಾಧನ ಸಾಮಗ್ರಿಗಳ ಮೂಲಕ ಅಡಿಯಿಂದ ಮುಡಿಯವರೆಗೆ ಸಿಂಗರಿಸಿಕೊಂಡು, ಮೇಲೆ ಸುಗಂಧದ ದ್ರವ್ಯ ಸಿಂಪಡಿಸಿಕೊಂಡು ಸಂಭ್ರಮಿಸುತ್ತಾನೆ. ಅದರಲ್ಲೂ ಮಹಿಳೆಯರು ಒಂದಿಷ್ಟು ಹೆಚ್ಚು. ಇದು ಬಾಹ್ಯಾಡಂಬರದ ಮಾತಾಯಿತು. ಆದರೆ ಅಂತರಂಗದ ಶುದ್ಧಿ? ದೇಹ ಇಡಿಯಾಗಿ ಶುದ್ಧ ಇರಬೇಕಲ್ಲವೇ. ಅದಕ್ಕೆ ಬಸವಣ್ಣನವರು ಅತಿ ಸರಳವಾಗಿ:

'ಕಳಬೇಡ ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ' ಎಂದು ಹೇಳಿದ್ದಾರೆ.

'ಬಹಿರಂಗದೊಂದಿಗೆ ಅಂತರಂಗ ಶುದ್ಧಿ' ಆದಾಗಲೇ ಮನುಷ್ಯ ನಿಜವಾಗಿ ಮಾನವನಾಗುತ್ತಾನೆ. ಅಂತರಂಗ ಶುದ್ಧಿಗಾಗಿ ಪ್ರಸಾಧನ ಸಾಮಗ್ರಿಗಳು ವಿಭಿನ್ನವಾಗಿವೆ. ಅವುಗಳನ್ನು ಅನುಸರಿಸಿ ಆಚರಿಸಿದಾಗಲೇ ಅವನ ತನುಮನ ಶುದ್ಧವಾಗಿ ಆತ್ಮೋದ್ಧಾರವಾಗುತ್ತದೆ. ಅತಿ ಸರಳವಾದ ಅಂತರಂಗ ಬಹಿರಂಗ ಶುದ್ಧಿಮಾರ್ಗಗಳನ್ನು ಬಸವಣ್ಣ ಬೋಧಿಸಿದ್ದಾರೆ. ಅನುಸರಿಸುವುದಷ್ಟೇ ಬಾಕಿ ಇದೆ.

●